# ಅನಿವಾಸಿ ಭಾರತೀಯರ ನೃತ್ಯ ಮೋಹ



ಸಿಂಗಾಪುರದಲ್ಲಿ ನೆಲೆಸಿರುವ ಗೌರಿ ಮೋಹನ್. ಚಿತ್ರ: ಇರ್ಷಾದ್ ಮಹಮ್ಮದ್

ನೃತ್ಯ, ಕಲೆಯ ನೆಲೆವೀಡು ಭಾರತ. ಅಂತೆಯೇ ನೃತ್ಯ ಕಲಿಯಲು ಇಲ್ಲಿಗೆ ದಾಪುಗಾಲಿಡುವ ವಿದೇಶಿಗರ ಸಂಖ್ಯೆಗೇನು ಕಡಿಮೆ ಇಲ್ಲ. ತಮ್ಮ ಮಕ್ಕಳು ಮೂಲ ಸಂಸ್ಕೃತಿಯ ನೃತ್ಯ ಶೈಲಿಯನ್ನೇ ಕಲಿಯಬೇಕೆಂಬ ಹಂಬಲ ಅನಿವಾಸಿ ಭಾರತೀಯರದು. ಮರದ ಕೊಂಬೆಗಳು ಹೊರಚಾಚಿದ್ದರೂ, ಮೂಲ ಬೇರನ್ನು ಅರಸಿ ಬರುವವರ ಸಂಖ್ಯೆ ಹೆಚ್ಚು. ಮಕ್ಕಳೂ ಇಲ್ಲಿಯ ಕಲೆಗೆ ಮಾರು ಹೋಗಿ, ನೃತ್ಯದ ವಿವಿಧ ಪ್ರಕಾರಗಳನ್ನು ಕಲಿತು, ಕಲೆತು ವಿದೇಶದಲ್ಲಿ ಪಸರಿಸುತ್ತಿದ್ದಾರೆ. ಇಲ್ಲಿನ ಸಾಂಸ್ಕೃತಿಕ ಹಿರಿಮೆಯನ್ನು ವಿದೇಶದಲ್ಲಿ ಸಾರುತ್ತಿರುವವರಲ್ಲಿ ಸಿಂಗಾಪುರದ ಗೌರಿ ಮೋಹನ್ ಕೂಡ ಒಬ್ಬರು.

ಉದ್ಯಾನನಗರಿ ಬೆಂಗಳೂರಿನಲ್ಲಿ ಈಚೆಗೆ ಭರತನಾಟ್ಯ ರಂಗಪ್ರವೇಶ ಮಾಡಿರುವ ಗೌರಿ ಅವರು ಸಿಂಗಾಪುರದ 'ಯುನೈಟೆಡ್ ವರ್ಲ್ಡ್ ಕಾಲೇಜ್ ಆಫ್ ಸೌತ್ ಈಸ್ಟ್ ಏಷ್ಯಾ'ದಲ್ಲಿ 12ನೇ ತರಗತಿಯ ವಿದ್ಯಾರ್ಥಿನಿ. 8 ವರ್ಷಗಳಿಂದ ಸಿಂಗಪುರದಲ್ಲಿ ನೆಲೆಯೂರಿರುವ ಕೇರಳದ ಬಿಜೋಯ್ ಮೋಹನ್ ಹಾಗೂ ಮೈಸೂರಿನ ಮಾಲಾ ಶ್ರೀನಿವಾಸನ್ ದಂಪತಿಯ ಪುತ್ರಿ ಗೌರಿ ಹಲವು ನೃತ್ಯ ಪ್ರದರ್ಶನ ನೀಡಿ ಹೊರದೇಶದಲ್ಲಿ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ತಾಯಿಯ ಒತ್ತಾಸೆಯಂತೆ ಭರತನಾಟ್ಯ ಕಲಿಕೆ ಆರಂಭಿಸಿದ ಗೌರಿ, ನೃತ್ಯದ ಮೂಲಕ ಒಂದಷ್ಟು ಸಮಾಜ ಸೇವೆಯಲ್ಲೂ ತೊಡಗಿದ್ದಾರೆ. ನೃತ್ಯ ಪ್ರದರ್ಶನದ ಮೂಲಕ ಸಂಗ್ರಹವಾದ ಹಣವನ್ನು ಸಿಂಗಪುರದಲ್ಲಿರುವ ಅಂಗವಿಕಲ ಹಾಗೂ ಅನಾಥ ಮಕ್ಕಳ ಮನೆ 'ಬಾಲ ವಿಹಾರ'ಕ್ಕೆ (ಚೆನ್ನೈ ಮೂಲದ ಎನ್‌ಜಿಒ) ನೀಡುತ್ತಿದ್ದಾರೆ. ಅನಾಥಾಶ್ರಮದ ವೃದ್ಧರ ಚಿಕಿತ್ಸೆಗೂ ನೆರವಾಗುತ್ತಿದ್ದಾರೆ. ಸಮಾಜಕ್ಕೆ ಸಹಾಯ ಹಸ್ತ ಚಾಚುವ ಹಂಬಲ ಚಿಕ್ಕ ವಯಸ್ಸಿಗೆ ಬೆಟ್ಟದಷ್ಟಿದೆ.

'ಬೆಳಿಗ್ಗೆ ಬೇಗ ಏಳೋದು, ನೃತ್ಯ ಅಭ್ಯಾಸ ಮಾಡೋದು ನನಗೆ ಇಷ್ಟವಿರಲಿಲ್ಲ. ಅಮ್ಮನ ಒತ್ತಾಯಕ್ಕೆ ಮಣಿದು ನೃತ್ಯ ತರಬೇತಿಗೆ ಹೋಗುತ್ತಿದ್ದೆ. ರಾಮಾಯಣದ ಪ್ರಸಂಗವೊಂದನ್ನು ನೃತ್ಯದ ಮೂಲಕ ಅಭಿವ್ಯಕ್ತಿಸುವ ಅನಿವಾರ್ಯತೆ ಆಕಸ್ಮಿಕವಾಗಿ ಎದುರಾಯಿತು. ಅದಕ್ಕಾಗಿ ಪೂರ್ವ ತಯಾರಿಯೂ ನಡೆಸಿರಲಿಲ್ಲ. ಒಂದು ದಿನ ಮಾತ್ರ ತಾಲೀಮಿಗೆ ಅವಕಾಶವಿತ್ತು. ನನಗೆ ತಿಳಿದಷ್ಟು ಮಟ್ಟಿಗೆ ತಯಾರಾಗಿ ನೃತ್ಯ ಪ್ರದರ್ಶಿಸಿದೆ. ಆಗ ಎಲ್ಲರಿಂದಲೂ ಮೆಚ್ಚುಗೆ ವ್ಯಕ್ತವಾಯಿತು. ಭರತನಾಟ್ಯ ಶಿಕ್ಷಕಿ ಕೂಡ ಬಹುವಾಗಿ ಮೆಚ್ಚಿಕೊಂಡರು. ಆ ಕ್ಷಣ ನನ್ನಲ್ಲಿ ಆತ್ಮವಿಶ್ವಾಸ ಮೂಡಿತು. ಆಸಕ್ತಿ ಬೆಳೆದು ಕಲಿಕೆಯಲ್ಲಿ ಉತ್ಸಾಹ ಹೆಚ್ಚಿತು. ಅಂದಿನಿಂದ ನೃತ್ಯವೇ ನನ್ನ ಆರಾಧನೆಯಾಯಿತು' ಎಂದು ನೃತ್ಯದ ಬಂಧ ಬೆಸೆದ ಬಗೆಯನ್ನು ಮೆಲುಕು ಹಾಕುತ್ತಾರೆ ಗೌರಿ.

ನವರಾತ್ರಿ, ದೀಪಾವಳಿ ಹಬ್ಬ ಹಾಗೂ ವಿಶೇಷ ಸಂದರ್ಭಗಳಲ್ಲಿ ಹಲವಾರು ನೃತ್ಯ ಪ್ರದರ್ಶನಗಳನ್ನು ನೀಡಿದ್ದಾರೆ. ಸ್ವಚ್ಛಭಾರತ ಅಭಿಯಾನಕ್ಕೂ ನೃತ್ಯದ ಮೂಲಕ ಕೈಜೋಡಿಸಿರುವ ಗೌರಿ ಅವರದ್ದು, ಸದಾ ಚಟುವಟಿಕೆಯಿಂದ ಇರುವ ವ್ಯಕ್ತಿತ್ವ.

2013ರಿಂದ ಪ್ರತಿವರ್ಷ ಬೆಂಗಳೂರಿಗೆ ಬರುತ್ತಾರೆ. ಇಲ್ಲಿ ಮಿನಲ್ ಪ್ರಭು ಅವರ ಬಳಿ ಭರತನಾಟ್ಯ ತರಬೇತಿ ಪಡೆಯುತ್ತಿರುವ ಅವರು, ಸಿಂಗಾಪುರದಲ್ಲಿ ಗಾಯತ್ರಿ ಶ್ರೀರಾಮ್ ಅವರ ಬಳಿ ನೃತ್ಯಾಭ್ಯಾಸ ಮಾಡುತ್ತಿದ್ದಾರೆ.

ಗೌರಿ ಅವರು ಹುಟ್ಟಿದ್ದು ಬೆಂಗಳೂರಿನಲ್ಲಾದರೂ, ಬೆಳೆದದ್ದು ವಿದೇಶಗಳಲ್ಲಿ. 2 ವರ್ಷದ ಮಗುವಾಗಿದ್ದಾಗ ಪೋಷಕರೊಂದಿಗೆ ಚೀನಾದ ಶಾಂಘೈ ಸೇರಿದರು. ಅಲ್ಲಿ 6 ವರ್ಷ ಕಳೆದು ಮತ್ತೆ ಬಾಂಬೆಗೆ ಮರಳಿದರು. ವರ್ಷದ ಬಳಿಕ ದೆಹಲಿಗೆ, ಅಲ್ಲಿಂದ ಸಿಂಗಾಪುರಕ್ಕೆ. ಹೀಗೆ ಚಿಕ್ಕ ವಯಸ್ಸಿಗೆ ಪೋಷಕರೊಟ್ಟಿಗೆ ಮೂರು ದೇಶಗಳನ್ನು ಕಂಡಿರುವ ಗೌರಿ, 'ಭಾರತೀಯ ಸಂಸ್ಕೃತಿಯೇ ನನಗೆ ಅಚ್ಚುಮೆಚ್ಚು'ಎನ್ನುತ್ತಾರೆ.

'ಭಾರತೀಯರ ಆತ್ಮೀಯತೆ, ಸಂಬಂಧಗಳಿಗೆ ಕೊಡುವ ಬೆಲೆ ನನಗೆ ಹೆಚ್ಚು ಇಷ್ಟ. ಇದನ್ನು ಸಿಂಗಾಪುರ ಅಥವಾ ಚೀನಾದಂತಹ ದೇಶಗಳಲ್ಲಿ ನಿರೀಕ್ಷೆ ಮಾಡಲು ಆಗುವುದಿಲ್ಲ. ಅಲ್ಲೂ ಒಳ್ಳೆಯವರಿದ್ದಾರೆ. ಆದರೆ, ಇಲ್ಲಿಯ ಆತ್ಮೀಯತೆ ಇರುವುದಿಲ್ಲ. ತಾಯ್ನಾಡಲ್ಲೇ ಭರತನಾಟ್ಯ ರಂಗಪ್ರವೇಶ ಮಾಡಬೇಕು ಎಂಬ ಮಹದಾಸೆ ನನ್ನದಾಗಿತ್ತು. ಅದು ಕೈಗೂಡಿತು' ಎನ್ನುವ ಗೌರಿ, ಇಲ್ಲಿನ ಸುರಕ್ಷತೆ ಬಗ್ಗೆ ಆತಂಕವನ್ನೂ ವ್ಯಕ್ತಪಡಿಸುತ್ತಾರೆ.

'ಸಿಂಗಾಪುರದಲ್ಲಿ ರಾತ್ರಿ ಎಷ್ಟು ಹೊತ್ತಾದರೂ ಒಬ್ಬರೇ ನಿರ್ಭಯವಾಗಿ ಓಡಾಡಬಹುದು. ಆದರೆ ಆ ರೀತಿಯ ವಾತಾವರಣ ಇಲ್ಲಿಲ್ಲ. ಹೊರಗೆ ಹೋದ ಮಕ್ಕಳು ಮನೆಗೆ ಮರಳುವವರೆಗೂ ಪೋಷಕರಿಗೆ ಆತಂಕ ಕಾಡುತ್ತಲೇ ಇರುತ್ತದೆ. ಆ ಕಳವಳ ಸಿಂಗಾಪುರದಂತಹ ದೇಶದಲ್ಲಿ ಇಲ್ಲ. ನಮ್ಮ ವ್ಯಕ್ತಿತ್ವ ರೂಪುಗೊಳ್ಳಲು ಇಂತಹವು ಸಹ ಪ್ರಭಾವ ಬೀರುತ್ತವೆ. ಹೆಣ್ಣು ಯಾವ ಸಮಯದಲ್ಲಾದರೂ, ಏನನ್ನಾದರೂ ಕಲಿಯಬೇಕು ಎಂದು ಇಚ್ಛಿಸಿದರೆ ಆಗ ಅಭದ್ರತೆ ಕಾಡಬಾರದು. ರಕ್ಷಣೆ, ಸುರಕ್ಷತೆಗೆ ಅಲ್ಲಿ ಹೆಚ್ಚು ಆದ್ಯತೆ. ಆ ರೀತಿಯ ವಾತಾವರಣ ಇಲ್ಲಿ ಸೃಷ್ಟಿಯಾಗಬೇಕು' ಎನ್ನುತ್ತಾರೆ ಗೌರಿ.

ಭಾಂಗ್ರಾ, ಸಾಲ್ಸಾ, ಹಿಪ್–ಹಾಪ್ ನೃತ್ಯವನ್ನೂ ಕಲಿತು ಪ್ರದರ್ಶನ ನೀಡಿರುವ ಗೌರಿ ಅವರಿಗೆ, ಪಿಯಾನೊ ನುಡಿಸುವುದು, ಟೆನಿಸ್, ಸಾಫ್ಟ್ ಬಾಲ್ ಆಡುವುದು, ಮಕ್ಕಳೊಂದಿಗೆ ಸಮಯ ಕಳೆಯುವುದು ಹೆಚ್ಚು ಇಷ್ಟ. ಹಿಂದಿ, ಇಂಗ್ಲಿಷ್, ಚೀನಾ ಭಾಷೆಯನ್ನು ಸುಲಲಿತವಾಗಿ ಮಾತನಾಡುವ ಗೌರಿ, ಬೇರೆ ಬೇರೆ ಭಾಷೆ ಕಲಿಯುವ ಹಂಬಲ ಹೊಂದಿದ್ದಾರೆ.

■ ಸುಮಾ ಬಿ.